ಮನೆಗಳ ನಿರ್ಮಾಣದ ಗುರಿಯನ್ನು ನಿಗದಿ ಪಡಿಸಿರುವುದಿಲ್ಲವಾದ್ದರಿಂದ ಈ ಮನೆಗಳನ್ನು ವಿತರಿಸುತ್ತಿಲ್ಲ.

ಸಂಖ್ಯೆ: ವಇ 27 ಹೆಚ್ ಎಎಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನ ಸಭೆ

284 ಶ್ರೀ ಗೋಪಾಲ ಭಂಡಾರಿ ಹೆಚ್

ಉನ್ನತ ಶಿಕ್ಷಣ ಸಚಿವರು

ಅ). ಕಾರ್ಕಳ ತಾಲ್ಲೂಕಿನ ಹೆಬ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಕಾರ್ಕಳದಲ್ಲಿರುವ ಕಾಲೇಜಿನಲ್ಲಿ ಈ ಶೈಕ್ಷಣಿಕ ವರ್ಷ ಪ್ರಾರಂಭದಂದಿನಿಂದ ಯಾವ ಯಾವ ಹೆಸರಿನ ಉಪನ್ಯಾಸಕರನ್ನು ಯಾವ ದಿನಾಂಕದಲ್ಲಿ ವರ್ಗಾಯಿಸಲಾಗಿದೆ;

ಈ ಶೈಕ್ಷಣಿಕ ವರ್ಷದ ವರ್ಗಾವಣೆಯಲ್ಲಿ ಹೆಬ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ 05 ಉಪನ್ಯಾಸಕರುಗಳನ್ನು ವರ್ಗಾವಣೆ ಮಾಡಲಾಗಿದೆ. ಹಾಗೂ ಕಾರ್ಕಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ಉಪನ್ಯಾಸಕರ್ಯಾರನ್ನು ವರ್ಗಾವಣೆ ಮಾಡಿರುವುದಿಲ್ಲ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ). ಆ ಕಾಲೇಜುಗಳಲ್ಲಿ ಹಾಲಿ ಖಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಉಪನ್ಯಾಸಕರ ಹುದ್ದೆ ಎಷ್ಟೆಷ್ಟು; ತೆರವಾಗಿರುವ ಹುದ್ದೆಗಳೆಷ್ಟು;

: ಹೆಬ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೆಜು:–

ಮಂಜೂರಾದ ಹುದ್ದೆಗಳು .	10
ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ:	04
ಖಾಲಿ ಇರುವ ಹುದ್ದೆಗಳ ಸಂಖ್ಯೆ:	06

ಕಾರ್ಕಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು:

ಮಂಜೂರಾದ ಹುದ್ದೆಗಳು	05
ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ:	05

ಖಾಲಿ ಇರುವ ಹುದ್ದೆಗಳಿರುವುದಿಲ್ಲ.

ಇ). ವರ್ಷದ ಮಧ್ಯದಲ್ಲಿ ವರ್ಗಾವಣೆ ಮಾಡಿದಾಗ ಅಲ್ಲಿಗೆ ಉಪನ್ಯಾಸಕರನ್ನು ಕೊಡದಿರಲು ಕಾರಣವೇನು; ಯಾವಾಗ ಭರ್ತಿ ಮಾಡಲಾಗುವುದು?

ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಕಾರ್ಯಭಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲು ಪ್ರಾಂಶುಪಾಲರಿಗೆ ಅನುಮತಿ ನೀಡಲಾಗಿದೆ. ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾದವರಿಗೆ ಸ್ಥಳನಿಯುಕ್ತಿಗೊಳಿಸುವ ಸಂದರ್ಭದಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಕಾರ್ಯಭಾರಕ್ಕನುಗುಣವಾಗಿ ಭರ್ತಿ ಮಾಡಲಾಗುವುದು.

(ಇಡಿ 06 ಯುಜಿಹೆಚ್ 2008)

(ಅರವಿಂದ ಲಿಂಬಾವಳಿ)
ಉನ್ನತ ಶಿಕ್ಷಣ ಸಚಿವರು

ಕಾಲೇಜು ಶಿಕ್ಷಣ ಇಲಾಖೆ

ಅನುಬಂಧ

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಗೋಪಾಲ ಭಂಡಾರಿ.ಹೆಚ್.(ಕಾರ್ಕಳ)
ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 284ಕ್ಕೆ

ಕಾರ್ಕಳ ತಾಲ್ಲೂಕಿನ ಹೆಬ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಕಾರ್ಕಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ವರ್ಗಾವಣೆಯಾದ ಉಪನ್ಯಾಸಕರ ಬಗ್ಗೆ ಮಾಹಿತಿ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಸರ್ಕಾರಿ ಅಧಿಸೂಚನೆ ಸಂಖ್ಯೆ & ದಿನಾಂಕ	ವರ್ಗಾವಣೆಗೊಂಡ ಉಪನ್ಯಾಸಕರ ಹೆಸರು, ಪದನಾಮ & ವಿಷಯ	ವರ್ಗಾವಣೆಗೊಂಡ ಕಾಲೇಜು	ಪರಾ
1		ಶಿವಪ್ರಕಾಶ್,ಜಿ.ಎಸ್, ಇತಿಹಾಸ ಉಪನ್ಯಾಸಕರು, ಸಪ್ರದಕಾ, ಹೆಬ್ರಿ	ಸಪ್ರದಕಾ, ಬೀರೂರು	--
2		ಮಹಾದೇವಯ್ಯ, ರಾಜ್ಯಶಾಸ್ತ್ರ ಉಪನ್ಯಾಸಕರು, ಸಪ್ರದಕಾ, ಹೆಬ್ರಿ	ಸಪ್ರದಕಾ, ಹುಲ್ಲಹಳ್ಳಿ, ನಂಜನಗೂಡು ತಾ	--
3		ಡಾ:ಕುಬೇರನಾಯ್ಕ,	ಸರ್ಕಾರಿ ಆರ್.ಸಿ.	ಬೆಂಗಳೂರು

	ಇಡಿ 176 ಡಿಸಿಇ 2008(1), ದಿ:30–08–08	ವಾಣಿಜ್ಯಶಾಸ್ತ್ರ ಉಪನ್ಯಾಸಕರು, ಸಪ್ರದಕಾ, ಹೆಬ್ರಿ	ವಾಣಿಜ್ಯ ಕಾಲೇಜು, ಬೆಂಗಳೂರು	ಸರ್ಕಾರಿ ಆರ್.ಸಿ.ವಾಣಿಜ್ಯ ಕಾಲೇಜಿನ ಡಾ: ವಿಶ್ವಮೂರ್ತಿ ಇವರನ್ನು ಕುಬೇರನಾಯ್ಕ ಹುದ್ದೆಗೆದುರಾಗಿ ವರ್ಗಾವಣೆ ಮಾಡಲಾಗಿದೆ
4		ಆಶಾಲತ,ಬಿ, ವಾಣಿಜ್ಯಶಾಸ್ತ್ರ ಉಪನ್ಯಾಸಕರು, ಸಪ್ರದಕಾ, ಹೆಬ್ರಿ	ಸಪ್ರದಕಾ, ಶೃಂಗೇರಿ	--
5	ಇಡಿ 18 ಡಿಸಿಇ 2009, ದಿ:30–01–09	ಸುಧಾಕರ್,ಕೆ.ಜಿ. ವಾಣಿಜ್ಯಶಾಸ್ತ್ರ ಉಪನ್ಯಾಸಕರು, ಸಪ್ರದಕಾ, ಹೆಬ್ರಿ	ಸಪ್ರದಕಾ, ತೀರ್ಥಹಳ್ಳಿ	--

ಕಾರ್ಕಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ಯಾರನ್ನೂ ಬೇರೆ ಕಾಲೇಜಿಗೆ ವರ್ಗಾವಣೆ ಮಾಡಿರುವುದಿಲ್ಲ.

ಕಾಲೇಜು ಶಿಕ್ಷಣ ನಿರ್ದೇಶಕರು

ಕರ್ನಾಟಕ ವಿಧಾನಸಭೆ

285

ಶ್ರೀ ಗೋಪಾಲ ಭಂಡಾರಿ ಹೆಚ್.(ಕಾರ್ಕಳ)

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

1. ಕಾರ್ಕಳ ಪುರಸಭೆಯ ವ್ಯಾಪ್ತಿಯಲ್ಲಿ ಎಷ್ಟು ಕಾಲೋನಿಗಳನ್ನು ಕೊಳಚೆ ನಿರ್ಮೂಲನಾ ಮಂಡಳಿಯಿಂದ ಗುರುತಿಸಲಾಗಿದೆ?